ಓ ಎಸ್ ನಂ. 158/2021
ಡಿ ಡಬ್ಲ್ಯೂ: 1
ದಿನಾಂಕ 28-07-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ ಒ ಜೆ ವಕೀಲರಿಂದಃ</u>

ವಾದಿ ಸಿದ್ದಾಪುರ ಗ್ರಾಮಕ್ಕೆ ಸಂಬಂದಪಟ್ಟ ಎರಡು ಆಸ್ತಿಗಳ ಮೇಲೆ ದಾವೆ ಸಲ್ಲಿಸಿದ್ದಾರೆ ಎಂದರೆ ನಿಜ. ಸರ್ವೆ ನಂ.46/3 ಪಿ2 ರಲ್ಲಿ 1 ಎಕರೆ ಮತ್ತು 24/1 ಪಿ2 ರಲ್ಲಿ 39 ಗುಂಟೆ ಜಮೀನು ಇದೆ ಎಂದರೆ ನಿಜ. ದಾವಾ ಆಸ್ತಿಗಳು ನನ್ನ ಮತ್ತು 1 ನೇ ಪ್ರತಿವಾದಿ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ನಿಜ. ಸರ್ವೆ ನಂ.18/3 ರಲ್ಲಿ 1 ಎಕರೆ 15 ಗುಂಟೆ ಜಮೀನು ನನಗೆ ಇದೆ ಎಂದರೆ ನಿಜ. ಸರ್ವೆ ನಂ.26/4 ಪಿ2 ರಲ್ಲಿ 1 ಎಕರೆ 15 ಗುಂಟೆ, ಸರ್ವೆ ನಂ.26/2 ಪಿ2 ರಲ್ಲಿ 1 ಎಕರೆ 16 ಗುಂಟೆ, ಸರ್ವೆ ನಂ.35 ರಲ್ಲಿ 4 ಎಕರೆ ಜಮೀನು ನನಗೆ ಇದೆ ಎಂದರೆ ಸರಿಯಲ್ಲ. ನಿಡಿ-1 ರ ದಾಖಲೆಯನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ನಿಜ. ನಿಡಿ-1 ರ ದಾಖಲೆಯಲ್ಲಿ ಕಂಡು ಬರುವ ಸ್ವತ್ತುಗಳು ನಮ್ಮ ಒಟ್ಟು ಕುಟಂಬಕ್ಕೆ ಸೇರಿದ್ದು ಎಂದರೆ ನಿಜ.

ದಾವಾ ಐಟಂ ನಂ.2 ರ ಆಸ್ತಿಯನ್ನು ದಿನಾಂಕ 22/11/2018 ರಂದು ಕ್ರಯದ ಕರಾರನ್ನು ವಾದಿಗೆ ನಾನು ಮತ್ತು ಉಳಿದ ಪ್ರತಿವಾದಿಗಳು ಮಾಡಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಅಷ್ಟಾಗಿ ಬರುವುದಿಲ್ಲ. 1 ನೇ ಪ್ರತಿವಾದಿ 10 ನೇ ತರಗತಿಯವರೆಗೆ

ವಿದ್ಯಾಭ್ಯಾಸ ಮಾಡಿರುತ್ತಾರೆ. ಕ್ರಯದ ಕರಾರಿಗೆ ಪ್ರತಿವಾದಿಗಳೆಲ್ಲರೂ ಸಹಿ ಮಾಡಿದ್ದೇವೆ ಎಂದರೆ ನಿಜ. ಕ್ರಯದ ಕರಾರಿಗೆ ವಾದಿ ಜತೆ ಮಾತುಕತೆ ಮಾಡಿಕೊಂಡು ಪ್ರತಿವಾದಿಗಳಾದ ನಾವುಗಳೆಲ್ಲರೂ ಸಹಿ ಮಾಡಿದ್ದೇವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ದುಡ್ಡಿನ ವಿಚಾರವಾಗಿ ಆಧಾರ ಮಾಡಿಕೊಟ್ಟಿರುತ್ತೇವೆ ಎಂದು ನುಡಿದಿರುತ್ತಾರೆ.

13 ಲಕ್ಷ ರೂಗಳಿಗೆ ಮಾತುಕತೆಯಾಗಿದ್ದು ಅದರ ಪೈಕಿ ಮುಂಗಡವಾಗಿ 12 ಲಕ್ಷದ 90 ಸಾವಿರ ರೂಗಳನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಲವಾಗಿ ಪಡೆದಿದ್ದೇವೆ ಎಂದು ನುಡಿದಿರುತ್ತಾರೆ. ಪತ್ರದಲ್ಲಿ ಸಾಲ ಎಂದು ಬರೆದಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿ ಆ ರೀತಿ ಬರೆಯಲು ಬರುವುದಿಲ್ಲ, ಹಣ ವಾಪಸು ನೀಡಿದ ತಕ್ಷಣ ಮಾಡಿಕೊಡುತ್ತೇನೆ ಎಂದು ನುಡಿದಿರುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.